ಶ್ರೀ ರಮಾನಾಥ ರೈ:- ಒಂದು ಪೋಲೀಸ್ ಠಾಣೆ ನಕ್ಷೆ ಈಗಾಗಲೇ ತಯಾರಾಗಿದೆ. ಇದರ ಬಗ್ಗೆ ನಾವು ಅದಷ್ಟು ಶೀಘ್ರವಾಗಿ ಕಾರ್ಯಕ್ರಮ ಹಾಕಿಕೊಳ್ಳುತ್ತೇವೆ.

ವಿಷಯ:- ಹೈದರಾಬಾದ್ ಕರ್ನಾಟಕ ಪ್ರದೇಶಗಳಲ್ಲಿನ ಜನರು ಬಸ್‌ಟಾಪ್‌ಗಳ ಮೇಲೆ ಪ್ರಯಾಣ ಮಾಡುತ್ತಿರುವ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೧೪:- (೧೪೮)
ಶ್ರೀ ಗುರುಪಾದಪ್ಪ ನಾಗ್ಮಾರಪಳ್ಳಿ (ಔರಾದ್)
ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೈದರಾಬಾದ್ ಕರ್ನಾಟಕ ಪ್ರದೇಶಗಳಲ್ಲಿನ ಅದರಲ್ಲೂ ವಿಶೇಷವಾಗಿ ಬೀದರ್ ಹಾಗೂ ಗುಲ್ಬರ್ಗ ಜಿಲ್ಲೆಯ ಜನರು ಬಸ್ಸುಗಳ ಕೊರತೆಯಿಂದಾಗಿ ಬಸ್‌ಟಾಪ್‌ಗಳ ಮೇಲೆ ಪ್ರಯಾಣ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಆ) ಈ ಬಸ್ ಮೇಲ್ಸಾವಣಿಯ ಮೇಲಿನ ಪ್ರಯಾಣವನ್ನು ತಡೆಗಟ್ಟಲು ಅಗತ್ಯ ಸಂಖ್ಯೆಯ ಬಸ್‌ಗಳನ್ನು ಈ ಪ್ರದೇಶಗಳಿಗೆ ಓಡಿಸಲಾಗುವುದೇ?

ಇ) ಈಗಿನ ಸರ್ಕಾರದಿಂದ ಇದುವರೆಏಗೆ ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ವಿಶೇಷವಾಗಿ ಬೀದರ್ ಮತ್ತು ಗುಲ್ಬರ್ಗ ಜಿಲ್ಲೆಗಳಿಗೆ ಎಷ್ಟು ಬಸ್‌ಗಳನ್ನು ಒದಗಿಸಲಾಗಿದೆ?

ಶ್ರೀ ಭೀಮಣ್ಣ ಖಂಡ್ರೆ
(ಸಾರಿಗೆ ಸಚಿವರು)

ಹೌದು.

ಹೌದು

ಬಸ್ಸುಗಳ ಭಾವಣಿಗಳ ಮೇಲೆ ಪ್ರಯಾಣಿಸುವುದನ್ನು ತಡೆಗಟ್ಟಲು ಏಪ್ರಿಲ್ ೯೨ರಿಂದ ಇಲ್ಲಯವರಿಗೆ ಗುಲ್ಬರ್ಗ ವಿಭಾಗಕ್ಕೆ ೧೪ ಅಧಿಕ ಅನುಸೂಚಿಗಳನ್ನು, ಬೀದರ್ ವಿಭಾಗಕ್ಕೆ ೫ ಅಧಿಕ ಅನುಸೂಚಿಗಳನ್ನು ಮತ್ತು ರಾಯಚೂರು ವಿಭಾಗಕ್ಕೆ ೧೪ ಅಧಿಕ ಅನುಸೂಚಿಗಳನ್ನು ಕಲ್ಪಿಸಲಾಗಿದೆ. ಅಲ್ಲದೆ ಮಾರ್ಚ್ ೯೩ರ ವೇಳೆಗೆ ಈ ಜಿಲ್ಲೆಗಳಿಗೆ ೩೩ ಹೆಚ್ಚುವರಿ ಅನುಸೂಚಿಗಳನ್ನು ಕಲ್ಪಿಸಲು ಯೋಚಿಸಿದೆ.

ಶ್ರೀ ಬಸವರಾಜ ರಾಯರೆಡ್ಡಿ:- ಈ ಪ್ರಶ್ನೆಯನ್ನು ಸಾರಿಗೆ ಸಚಿವರಿಗೆ ಕೇಳಿದ್ದಾರೋ ಅಥವಾ ಮುಖ್ಯಮಂತ್ರಿಗಳಿಗೆ ಕೇಳಿದ್ದಾರೋ ಗೊತ್ತಾಗುತ್ತಾ ಇಲ್ಲ. ಇಲ್ಲಿ ಮುದ್ರಣದಲ್ಲಿ ಸ್ವಲ್ಪ ತಪ್ಪಾಗಿದೆ. ಮುಖ್ಯಮಂತ್ರಿಗಳು ಎಂದು ಬಂದಿದೆ. ಚೀಫ್ ಮಿನಿಸ್ಟರ್ ಫಾರ್ ಟ್ರಾನ್ಸ್‌ಪೋರ್ಟ್ ಎಂದು ಇದೆ. ನನ್ನ ಪ್ರಶ್ನೆಯಲ್ಲೂ ಒಂದು ತಪ್ಪು ಇದೆ. ಅಂದರೆ, ಖಂಡ್ರೆಯವರೂ ಚೀಫ್ ಮಿನಿಸ್ಟರ್ ಆಗುತ್ತಾರೆಯೋ. ಇದನ್ನು ದಯಮಾಡಿ ಸರಿಮಾಡುವುದಕ್ಕೆ ಹೇಳಬೇಕು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಪರವಾಯಿಲ್ಲ, ಮುಖ್ಯಮಂತ್ರಿಗಳಾದರೂ ಉತ್ತರ ಹೇಳಲಿ ಅಥವಾ ಯಾರಾದರೂ ಉತ್ತರ ಹೇಳಲಿ, ಸಂತೋಷ. ಮಾನ್ಯ ಮಂತ್ರಿಗಳು ಬಸ್ಸಿನ ಮೇಲೆ ಜನಗಳು ಕುಳಿತುಕೊಳ್ಳುವುದು ನಮ್ಮ ಗಮನಕ್ಕೆ ಬಂದಿದೆ ಎಂದು ಹೇಳಿದ್ದೀರಿ. ಇವತ್ತು ಬಹಳ ಜನ ಬಸ್ಸಿನ ಮೇಲೆ ಕುಳಿತುಕೊಳ್ಳುವುದನ್ನು ತಾವೂ ನೋಡಿದ್ದೀರಿ. ತಾವೂ ಕೂಡ ಅಲ್ಲಿಯವರೇ, ತಮಗೆಲ್ಲಾ ಗೊತ್ತಿದೆ. ಈಗ ನಮಗೆ ಏನಾಗಿದೆ ಎಂದರೆ, ಮಾನ್ಯ ಖಂಡ್ರೆಯವರು ಮಂತ್ರಿಯಾದ ಮೇಲೆಯೂ ಈ ರೀತಿ ಏಕೆ ಆಗುತ್ತಿದೆ, ಇದು ಆಗಬಾರದು. ಈ ರೀತಿ ಮಾಡಬಾರದು ಎಂದು, ಮೊದಲು ಅವರೇ ಎಲ್ಲರಿಗೂ ಬೈಯುತ್ತಿದ್ದರು. ಆದರೆ,

ಈಗ ಅವರ ಕಾಲದಲ್ಲಿ ಈ ರೀತಿ ಆದರೆ ಹೇಗೆ? ಇದರ ಬಗ್ಗೆ ತಾವು ಏನೇನು ಕ್ರಮ ತೆಗೆದುಕೊಳ್ಳುತ್ತಿರಿ. ಇನ್ನೂ ಹೆಚ್ಚಿಗೆ ಬಸ್ಸುಗಳನ್ನು ಹಾಕುತ್ತೀರಾ ಎಂದು ಕೇಳಿದ್ದೇನೆ. ತಾವು ೧೮ ಹಾಕಿದ್ದೇವೆ, ೯ ಹಾಕಿದ್ದೇವೆ ಮತ್ತೆ ೪ ಎಂದು ಹೇಳಿದಿರಿ. ಈಗ ರಾಷ್ಟ್ರೀಕರಣ ಆಗುವುದಕ್ಕಿಂತ ಮೊದಲು ಎಷ್ಟು ಸರ್ವೀಸ್ ಇತ್ತೋ ಅಷ್ಟಾದರೂ ಇದೆಯೇ? ತಾವೇ ಈ ಪ್ರಶ್ನೆಯನ್ನು ಮೊದಲು ಕೇಳುತ್ತಿದ್ದಿರಿ. ಈಗ ತಮ್ಮ ಗಮನಕ್ಕೆ ಬಂದಿದೆ. ರಾಷ್ಟ್ರೀಕರಣ ಆಗುವುದಕ್ಕೆ ಮೊದಲು ಎಷ್ಟು ಬಸ್ಸುಗಳು ಇತ್ತೋ, ಅಷ್ಟಾದರೂ ಮಾಡುವುದಕ್ಕೆ ಸಾಧ್ಯವೇ? ಯಾವಾಗ ಮಾಡುತ್ತೀರಿ ಮತ್ತು ಯಾವಾಗ ಈ ಅವ್ಯವಸ್ಥೆಯನ್ನು ತಪ್ಪಿಸುತ್ತೀರಿ, ದಯಮಾಡಿ, ಖಚಿತವಾಗಿ ಹೇಳಿ.

ಶ್ರೀ ಭೀಮಣ್ಣ ಖಂಡ್ರೆ:- ರಾಷ್ಟ್ರೀಕರಣ ಆಗುವುದಕ್ಕೆ ಮೊದಲು ಎಷ್ಟು ಬಸ್ಸುಗಳು ಇದ್ದವು ಎಂಬ ಅಂಕಿಅಂಶ ನನ್ನ ಹತ್ತಿರ ಇಲ್ಲ. ಆದರೆ, ಈಗ ಏನು ಬೇಕು, ಅದರ ಬಗ್ಗೆ ಮಾತ್ರ ಪೂರೈಕೆ ಮಾಡುತ್ತಿದ್ದೇವೆ. ಸದ್ಯ ಎಂದರೆ, ಏಪ್ರಿಲ್ ೧೯೯೨ರಿಂದ, ಗುಲ್ಬರ್ಗಾ ಡಿವಿಜನ್‌ಗೆ ೧೮ ಅಡಿಷನಲ್ ಷೆಡ್ಯೂಲ್ ಕೊಟ್ಟಿದ್ದೇವೆ, ಬೀದರ್‌ಗೆ ೫ ಅಡಿಷನಲ್, ೧೪ ಅಡಿಷನಲ್ ಷೆಡ್ಯೂಲ್ ರಾಯಚೂರಿಗೆ ಮತ್ತು ಗುಲ್ಬರ್ಗಾಕ್ಕೆ ೧೦. ಹೀಗೆ ಒಟ್ಟು ೩೩ ಬಸ್ಸುಗಳನ್ನು ೩೧-೩-೯೩ಕ್ಕೆ ಮುಂಚಿತವಾಗಿಯೇ ಕೊಡುತ್ತಿದ್ದೇವೆ. ನೀವು ಇನ್ನೂ ೭ ಬಸ್ಸುಗಳನ್ನು ಬೇಡುತ್ತಿದ್ದೀರಿ, ಇದರ ಬಗ್ಗೆ ವಿಚಾರ ಮಾಡುತ್ತೇವೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಔರಾದ್ ನಿಂದ, ೪ ಬಸ್ಸುಗಳು ಏನು ಮಾಡುತ್ತವೆ, ಎಲ್ಲೆಲ್ಲಿ ಹೋಗಬೇಕು ಎನ್ನುವುದನ್ನು ಹೇಳಬೇಕು. ಈ ತೊಂದರೆಯನ್ನು ತಪ್ಪಿಸುವುದಕ್ಕೆ ಸಾಧ್ಯ ಎಲ್ಲಿದೆ? ಯಾವಾಗ ತಪ್ಪಿಸುತ್ತೀರಿ. ೧೪ ಬಸ್ಸುಗಳು ಹೋಗುವ ಕಡೆ ೪ ಬಸ್ ಎಂದು ಹೇಳಿದರೆ ಏನೂ ಆಗುವುದಿಲ್ಲ. ಅದು ಇನ್ನೂ ೧೯೯೩ಕ್ಕೆ ಮಾಡುತ್ತೇವೆಂದು ಹೇಳುತ್ತಿದ್ದೀರಿ, ಇನ್ನೂ ಮಾಡಿಲ್ಲ. ಇದನ್ನು ಕೂಡಲೇ ವ್ಯವಸ್ಥೆ ಮಾಡಬೇಕು. ಏಕೆಂದರೆ, ಊರಿಂದ ಊರಿಗೆ ಜನ ನಿಂತು ಹೋಗುತ್ತಿದ್ದಾರೆ. ಎಲ್ಲೆಲ್ಲಿ, ಯಾವ ಯಾವ ಊರಿಗೆ ಬಸ್ ಹೋಗುವುದಿಲ್ಲ ಎಂಬುದು ತಮಗೂ ಗೊತ್ತಿದೆ. ಯಾವ ಊರಿಗೆ ಬಸ್ ಹೋಗಬೇಕೋ ಆ ಊರುಗಳಿಗೆ ಎಂದೆಂದೂ ಬಸ್ ಹೋಗಿಲ್ಲ, ಇದೂ ಕೂಡ ತಮ್ಮ ಗಮನದಲ್ಲಿದೆ. ಏಕೆ ಹೋಗಿಲ್ಲವೆಂದು ಕೇಳಿದರೆ, ಡ್ರೈವರ್ ಇಲ್ಲ, ಕಂಡಕ್ಟರ್ ಇಲ್ಲವೆಂದು ಹೇಳುತ್ತಾರೆ. ಇದಕ್ಕೆ ಯಾರು ಜವಾಬ್ದಾರರು. ನೀವು ಯಾವ ಊರಿಗೆ ಹಾಕಿದ್ದೀರಿ, ಆ ಊರಿಗೆ ಹೋಗುವುದೇ ಇಲ್ಲ. ಆ ಬಸ್ಸಿನವರು ಎಲ್ಲೆಲ್ಲೋ ಮಧ್ಯೆ ನಿಂತು ವಾಪಸ್ ಬರುತ್ತಾರೆ. ಹೀಗಾದರೆ, ಅಲ್ಲಿರುವ ಊರುಗಳ ಜನಗಳ ಗತಿ ಏನಾಗಬೇಕು, ನೀವು ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಭೀಮಣ್ಣ ಖಂಡ್ರೆ:- ನಾವು ಪ್ರಯತ್ನ ಮಾಡುತ್ತಿದ್ದೇವೆ. ಈಗ ಒಬ್ಬ ಡ್ರೈವರ್, ೪ ಜನ ಕಂಡಕ್ಟರ್ ಯಾರು ಕೆಲಸ ಮಾಡುತ್ತಿರಲಿಲ್ಲ ಅವರನ್ನು ಡಿಸ್‌ಮಿಸ್ ಮಾಡಿದ್ದೇವೆ. ನಂತರ ನಾವು ೩೯ ಜನ ಡ್ರೈವರ್ಸ್‌ನ್ನು, ೫೧ ಜನ ಕಂಡಕ್ಟರ್ಸ್‌ನ್ನು ಗುಲ್ಬರ್ಗದಿಂದ ಮಂಗಳೂರಿಗೆ ಶಿಫ್ಟ್‌ಮಾಡಿದ್ದೇವೆ. ಬೀದರ್‌ಗೆ ೩ ಜನ ಡ್ರೈವರ್ಸ್‌ನ್ನು ೬೦ ಜನ ಕಂಡಕ್ಟರ್ಸ್‌ನ್ನು ಮಾಡಿದ್ದೇವೆ. ೩೧-೩-೯೩ಕ್ಕೆ ಮೊದಲು ಏನು ಅವಶ್ಯಕತೆಗಳಿವೆ ಅವನ್ನು ಪೂರ್ಣ ಮಾಡುತ್ತೇವೆ.

ಅಧ್ಯಕ್ಷರು:- ಪ್ರಶ್ನೋತ್ತರ ವೇಳೆ ಮುಗಿಯಿತು.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ಇವತ್ತು ಬಹಳ ಪ್ರಮುಖವಾದ ಪ್ರಶ್ನೆ ಇದೆ. ನಾವು ನಮ್ಮ ಪ್ರಶ್ನೆ ಬರತ್ತದೆಂದು ಸುಮ್ಮನೆ ಕುಳಿತುಕೊಂಡಿದ್ದೆವು. ನೀವು ನಮ್ಮ ಸಹಾಯಕ್ಕೆ ಬರಬೇಕು. ದಯವಿಟ್ಟು ಅವಕಾಶ ಕೊಡಬೇಕು. ಪ್ರಶ್ನೋತ್ತರ ವೇಳೆ ಮುಗಿಯಿತು ಎಂದರೆ ಕಷ್ಟವಾಗುತ್ತದೆ. ಮಾನ್ಯ ಸದಸ್ಯರಾದ ಮೋಟಮ್ಮನವರ ಪ್ರಶ್ನೆ ಬಹಳ ಪ್ರಾಮುಖ್ಯವಾಗಿತ್ತು. ತಾವೇ ಅರಿತುಕೊಂಡು ಅವಕಾಶ ಕೊಟ್ಟಿರಿ.

ಅಧ್ಯಕ್ಷರು:- ಮಾನ್ಯ ಸದಸ್ಯರಲ್ಲಿ ಪ್ರಾರ್ಥನೆ. ಪ್ರಶ್ನೋತ್ತರ ಕಾಲದಲ್ಲಿ ಒಂದು ಗಂಟೆಯಲ್ಲಿ ೨೦ ಪ್ರಶ್ನೆಗಳಿಗೆ ಉತ್ತರ ಆಗಬೇಕು. ತಾವು ಉತ್ತರವನ್ನು ಪುನಃ ಓದಿ ಉಪಪ್ರಶ್ನೆಗಳನ್ನು ಕೇಳುವುದಕ್ಕಿಂತ ತಾವು ತಯಾರು ಮಾಡಿ ಇಟ್ಟುಕೊಂಡು ಪ್ರಶ್ನೆ ಕೇಳಿದರೆ ಸ್ವಲ್ಪದರಲ್ಲೇ ಎಲ್ಲರಿಗೂ ಸಮಾನ ಅವಕಾಶ ಸಿಗುತ್ತದೆ. ತಾವುಗಳು ಒಂದೇ ಪ್ರಶ್ನೆಗೆ ೧೦ ನಿಮಿಷ ತೆಗೆದುಕೊಂಡರೆ ಬೇರೆ ಯಾವ ಪ್ರಶ್ನೆಗಳಿಗೂ ಅನುಕೂಲವಾಗುವುದಿಲ್ಲ. ಅದಕ್ಕೆ ತಾವು ಏನು ಕೇಳಬೇಕೋ ಅದನ್ನು ಅರ್ಥಗರ್ಭಿತವಾಗಿ ಸ್ವಲ್ಪದರಲ್ಲಿಯೇ ಕೇಳಿದರೆ ಸರ್ಕಾರ ಅದಕ್ಕೆ ಸರಿಯಾದ ಉತ್ತರ ಕೊಡುತ್ತದೆ ಮತ್ತು ಎಲ್ಲರಿಗೂ ಸಮಾಧಾನಕರವಾದ ರೀತಿಯಲ್ಲಿ ನಡೆಸಿಕೊಂಡು ಹೋಗುವುದಕ್ಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ತಮ್ಮ ಸಲಹೆ ಸರಿಯಾಗಿದೆ. ನಾಳೆಯಿಂದ ಆ ಕೆಲಸ ಮಾಡೋಣ. ದಯವಿಟ್ಟು ಇವತ್ತು ಅವಕಾಶ ಕೊಡಿ.

(ಗೊಂದಲ)

ಶ್ರೀ ಎಸ್.ಹೆಚ್. ಕೌಜಲಗಿ:- ಮಾನ್ಯ ಅಧ್ಯಕ್ಷರೇ, ತಾವು ಅವಕಾಶ ಮಾಡಿ ಕೊಡಬೇಕು. ನನ್ನ ಪ್ರಶ್ನೆ ಬಹಳ ಪ್ರಾಮುಖ್ಯವಾಗಿದೆ. ತಾವು ಅವಕಾಶ ಕೊಡಬೇಕು.

(ಗೊಂದಲ)

<u>//ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.</u>

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು):- ಮಾನ್ಯ ಅಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸುವ ಮೊದಲನೆಯ ಪಟ್ಟಿಯಲ್ಲಿರುವ ಪ್ರಶ್ನೋತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ವಿಷಯ:- ಸಾರಿಗೆ ಇಲಾಖೆಯ ನಷ್ಟದ ಮೊತ್ತ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೧:- (೧)
ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ):-
ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಇಲಾಖೆಯಲ್ಲಿ (ಕೆ.ಎಸ್.ಆರ್.ಟಿ.ಸಿ) ೧೯೮೯-೯೦, ೧೯೯೦-೯೧, ೧೯೯೧-೯೨ನೇ ಡಿಸೆಂಬರ್ ಅಖ್ಯೆರುವರೆಗೆ ಆಗಿರುವ ನಷ್ಟವೆಷ್ಟು? (ವರ್ಷವಾರು ವಿವರ ನೀಡುವುದು)
ಆ) ಆ ರೀತಿ ನಷ್ಟಕ್ಕೆ ಕಾರಣಗಳೇನು?
ಇ) ಅಲ್ಲಿ ಅವ್ಯವಹಾರಗಳೇನಾದರೂ ಬೆಳಕಿಗೆ ಬಂದಿದೆಯೇ?
ಈ) ಬಂದಿದ್ದಲ್ಲಿ, ಅಂತಹ ಯಾವುದೇ ಅವ್ಯವಹಾರದ ಬಗ್ಗೆ ಕ್ರಮ ತೆಗೆದುಕೊಳ್ಳಲಾಗಿದೆಯೇ?
ಉ) ಅಲ್ಲಿನ ಅಪಾರವಾದ ಸೋರಿಕೆಯನ್ನು, ನಷ್ಟವನ್ನು ನಿಲ್ಲಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಭೀಮಣ್ಣ ಖಂಡ್ರೆ
(ಸಾರಿಗೆ ಸಚಿವರು)